# **ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.**

## **SC.261/2021**

**P.W.-06**
**C.W.-06**

| | | |
|---|---|---|
| ಹೆಸರು | : | Sheela |
| ಗಂಡನ ಹೆಸರು | : | Puttaswamy |
| ವಯಸ್ಸು | : | 34 Years |
| ಉದ್ಯೋಗ | : | Coolie |
| ವಾಸಸ್ಥಳ | : | Mysuru |

**ದಿನಾಂಕಃ 03.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ನನ್ನ ಸ್ವಂತ ಊರು ಬನ್ನಹಳ್ಳಿ. ನಾನು ಸಹಿ ಹಾಕುತ್ತೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಶವಪಂಚನಾಮೆಯಾಗಿದ್ದು, ಅದನ್ನು ನಿಪಿ–10 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–10(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು. ಲಕ್ಷ್ಮಮ್ಮ ಮೃತಪಟ್ಟರು ಎಂದು ತಿಳಿದು, ಶವವನ್ನು ನೋಡಲು ನಾನು ಟಿ.ನರಸೀಪುರದ ಆಸ್ಪತ್ರೆಗೆ ಹೋಗಿದ್ದೆ. ಆಕೆ ನಮ್ಮ ಪಕ್ಕದಮನೆಯವರು. ಶವವನ್ನು ನೋಡಿ ವಾಪಸ್ಸು ಬಂದೆ, ಆಗ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡರು. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಫೋಟೋಗಳನ್ನು ತೆಗೆದರೋ, ಇಲ್ಲವೋ ನನಗೆ ಗೊತ್ತಿಲ್ಲ. ಈಗ ತೋರಿಸುತ್ತಿರುವ ಫೋಟೋಗಳಲ್ಲಿ ನಾನು ಇದ್ದೇನೆ. ಅದರಲ್ಲಿ ಮೃತ ಲಕ್ಷ್ಮಮ್ಮನ ಶವ ಸಹ ಇದೆ. ಸದರಿ ಫೋಟೋಗಳನ್ನು ನಿಪಿ–11 ರಿಂದ 13 ಎಂದು ಗುರುತು ಪಡಿಸಿಕೊಳ್ಳಲಾಯಿತು. ಶವವನ್ನು ನೋಡಿದಾಗ ಎಲ್ಲೆಲ್ಲಿ ಗಾಯವಾಗಿತ್ತು ಎನ್ನುವುದನ್ನು ನಾನು ಗಮನಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)**

**SC.No.261/2021**
**P.W.-06**
**C.W.-06**

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ –**

2. ದಿಃ30.07.2021ರಂದು ನೀವು ಶವವನ್ನು ನೋಡಲು ಟಿ.ನರಸೀಪುರದ ಆಸ್ಪತ್ರೆಗೆ ಹೋಗಿದ್ದಿರಿ ಎಂದು ಮಾಡಿದ ಸಲಹೆಗೆ ಸಾಕ್ಷಿ, ದಿನಾಂಕದ ನೆನಪಿಲ್ಲ ಎನ್ನುತ್ತಾರೆ. ಅಲ್ಲಿ ಪೊಲೀಸರು ನನ್ನ ಸಮಕ್ಷಮ ಶವವನ್ನು ಪರೀಕ್ಷಿಸಿ ಶವದ ಮೇಲೆ ಆಗಿದ್ದಂತಹ ಗಾಯಗಳನ್ನು ಗುರುತಿಸಿ, ಬರೆದು, ನನ್ನ ಸಹಿಯನ್ನು ಪಡೆದರು ಎನ್ನುವುದು ಸರಿಯಲ್ಲ. ಅಲ್ಲಿ ರಂಗಯ್ಯ ಮತ್ತು ಶಾಂತರಾಜು ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ಅವರ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಶವಮಹಜರನ್ನು ನನಗೆ ಓದಿ ಹೇಳಿದ್ದು, ಅದನ್ನು ತಿಳಿದುಕೊಂಡು ನಂತರ ಸಹಿ ಹಾಕಿರುತ್ತೇನೆ ಎನ್ನುವುದು ಸರಿಯಲ್ಲ.

3. ಮೃತ ಲಕ್ಷ್ಮಮ್ಮ ನನ್ನ ಪಕ್ಕದ ಮನೆಯವರು. ಆಕೆ ನನ್ನ ಸಂಬಂಧಿಕಳು ಎನ್ನುವುದು ನನಗೆ ಗೊತ್ತಿಲ್ಲ. ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ– ಆರೋಪಿಯ ಪರ ವಕೀಲರು ಪಾಟೀಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲು ನಿರಕಾರಿಸಿ ಪಾಟೀಸವಾಲು "ಇಲ್ಲ" ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.